ಖಂಡವಿದೆಕೋ ಮಾಂಸವಿದೆಕೋ ಎಂದ ಪುಣ್ಯಕೋಟಿಯಂತೆ ಪಶ್ಚಿಮ ಘಟ್ಟಗಳು ನಮ್ಮ ಕಣ್ಣಿಗೆ ಕಾಣುತ್ತಿವೆ. ಆದರೆ, ಪುಣ್ಯಕೋಟಿಯ ಎದುರು ಚಂಡವ್ಯಾಘ್ರನೆಂಬ ಹುಲಿ ಪ್ರದರ್ಶಿಸಿದ ಉದಾತ್ತ ಮನೋಭಾವವನ್ನು ನಾವು ಪ್ರದರ್ಶಿಸುತ್ತಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ಪಶ್ಚಿಮ ಘಟ್ಟದ ಹಸುರನ್ನು ಸವಕಳಿಯಾಗಿಸುತ್ತಿದ್ದೇವೆ. ಗುಡ್ಡಗಳ ಒಡಲು ಬಗೆಯುತ್ತಿದ್ದೇವೆ. ನದಿಗಳ ದಿಕ್ಕು ತಪ್ಪಿಸುತ್ತಿದ್ದೇವೆ. ಇದೆಲ್ಲದರ ಪರಿಣಾಮವೇ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಉಂಟಾಗುತ್ತಿರುವ ಭೂಕುಸಿತ ಮತ್ತು ಪ್ರವಾಹದ ದುರಂತಗಳು. ಪಶ್ಚಿಮ ಘಟ್ಟಗಳೊಂದಿಗೆ ಕರ್ನಾಟಕ ಮತ್ತು ದಕ್ಷಿಣಭಾರತದ ಜನಜೀವನ ಪ್ರತ್ಯೇಕಿಸಲು ಸಾಧ್ಯವಾಗದಂತೆ ತಳಕು ಹಾಕಿಕೊಂಡಿದೆ. ಇದರ ಅರಿವಿಲ್ಲದೆಯೇ ನಿಂತ ನೆಲವನ್ನು ಬಗೆಯುವ ದುಸ್ಸಾಹಸವೂ ಚಾಲ್ತಿಯಲ್ಲಿದೆ. ಮಳೆಯ ಅಬ್ಬರ ಹಾಗೂ ಅದರ ಪರಿಣಾಮವಾಗಿ ನಾಡಿನ ವಿವಿಧ ಭಾಗಗಳಲ್ಲಿ ಭೂಕುಸಿತ, ಪ್ರವಾಹ ಉಂಟಾದಾಗ ಪರಿಹಾರ ಕಾರ್ಯಗಳ ಬಗ್ಗೆ ಯೋಚಿಸುತ್ತೇವೆ. ಅದು ಯುದ್ಧಕಾಲದ ಅನಿವಾರ್ಯ ಚಿಂತನೆ. ಸಮಸ್ಯೆಯ ಮೂಲವನ್ನು ಸರಿಪಡಿಸುವ ನಿಟ್ಟಿನಲ್ಲಿ ನಾವು ಗಮನಹರಿಸಬೇಕಾಗಿರುವುದು ಪಶ್ಚಿಮ ಘಟ್ಟಗಳ ಅನಾರೋಗ್ಯದ ಬಗ್ಗೆ. ಪಶ್ಚಿಮಘಟ್ಟದ ರೋಗಮೂಲಗಳ ಕಡೆಗೆ ಗಮನಸೆಳೆಯುವ ಬರಹ ಮತ್ತು ಅದರ ಸಂಪದ್ಭರಿತ ಮುಖಗಳನ್ನು ಕಾಣಿಸುವ ಚಿತ್ರಪಟ ಈ ವಾರದ ‘ಸುಧಾ’ ವಿಶೇಷ.

**ಟಿ.ಎಂ. ಶಿವಶಂಕರ್**
ನಿವೃತ್ತ ಹಿರಿಯ ಭೂ–ಜಲ ವಿಜ್ಞಾನಿ

ಚಿತ್ರಗಳು: ಅಶ್ವಿನಿಕುಮಾರ್ ಭಟ್

